(ಸದನವು ಬೆಳಿಗ್ಗೆ 11 ಗಂಟೆ 09 ನಿಮಿಷಕ್ಕೆ ಸಮಾವೇಶಗೊಂಡಿತು ಮಾನ್ಯ ಸಭಾಧ್ಯಕ್ಷರಾದ ಶ್ರೀ ಕಾಗೋಡು ತಿಮ್ಮಪ್ಪನವರು ಪೀಠವನ್ನು ಅಲಂಕರಿಸಿದ್ದರು)

ಅಧ್ಯಕ್ಷರು:– ಹುಟ್ಟುಹಬ್ಬದ ಶುಭಾಶಯ ಹೇಳುವುದಿದೆ.

ಈ ದಿನ ದಿನಾಂಕ 16.03.2015 ರಂದು ಹುಟ್ಟುಹಬ್ಬವನ್ನು ಆಚರಿಸಿಕೊಳ್ಳುತ್ತಿರುವ ಸದನದ ಸದಸ್ಯರು ಹಾಗೂ ಮಾನ್ಯ ಸಚಿವರಾದ ಶ್ರೀ ಆರ್.ವಿ. ದೇಶಪಾಂಡೆಯವರಿಗೆ ಜನ್ಮದಿನದ ಶುಭಾಶಯಗಳು. ಈ ಸಂದರ್ಭದಲ್ಲಿ ಭಗವಂತನು ತಮಗೆ ಆಯುರಾರೋಗ್ಯ ಐಶ್ವರ್ಯಗಳನ್ನು ದಯಪಾಲಿಸಲೆಂದು ಹಾರೈಸುತ್ತೇನೆ.

ಅಧ್ಯಕ್ಷರು:– ಈಗ ಸಂತಾಪ ಸೂಚನೆ.

1. ವಿಷಯ: ಚಿತ್ರ ನಿರ್ದೇಶಕರಾಗಿದ್ದ ಸಿದ್ದಲಿಂಗಯ್ಯ ಹಾಗೂ ಖ್ಯಾತ ಚಲನಚಿತ್ರ ನಿರ್ಮಾಪಕರಾಗಿದ್ದ ಡಿ. ರಾಮಾ ನಾಯ್ಡುರವರು ನಿಧನ ಹೊಂದಿರುವ ಬಗ್ಗೆ

ಸಂತಾಪ ಸೂಚನೆ

ಮಾನ್ಯ ಸಭಾಧ್ಯಕ್ಷರು:

ಸೃಜನಶೀಲ ಚಿತ್ರ ನಿರ್ದೇಶಕರಾಗಿದ್ದ ಸಿದ್ದಲಿಂಗಯ್ಯ ಹಾಗೂ ಖ್ಯಾತ ಚಲನಚಿತ್ರ ನಿರ್ಮಾಪಕರಾಗಿದ್ದ ಡಿ. ರಾಮಾ ನಾಯ್ಡು ಅವರುಗಳು ನಿಧನ ಹೊಂದಿರುವುದನ್ನು ಈ ಸದನಕ್ಕೆ ಅತ್ಯಂತ ವಿಷಾದದಿಂದ ತಿಳಿಸಬಯಸುತ್ತೇನೆ.

1. ಸಿದ್ದಲಿಂಗಯ್ಯ

ಸಿದ್ದಲಿಂಗಯ್ಯ ಅವರು ದಿನಾಂಕ 15ನೇ ಡಿಸೆಂಬರ್, 1936 ರಂದು ತುಮಕೂರು ಜಿಲ್ಲೆಯ ಶಿರಾ ತಾಲ್ಲೂಕಿನ ತರೂರು ಗ್ರಾಮದಲ್ಲಿ ಜನಿಸಿದ್ದು, ಕೃಷಿ ಕುಟುಂಬದ ಹಿನ್ನೆಲೆಯಿಂದ ಬಂದ ದಿವಂಗತರು ಕಲೆಯ ಬಗ್ಗೆ ಹೆಚ್ಚು ಆಸಕ್ತಿಯನ್ನು ಹೊಂದಿದ್ದ ಕಾರಣ ಫ್ಲೋರ್ ಬಾಯ್ ಆಗಿ ಚಿತ್ರರಂಗವನ್ನು ಪ್ರವೇಶಿಸಿದ್ದರು.

ಸಹ ನಿರ್ದೇಶಕರಾಗಿ ಕೆಲಸ ನಿರ್ವಹಿಸಿದ್ದ ಅವರು "ಮೇಯರ್ ಮುತ್ತಣ್ಣ" ಚಿತ್ರದ ಮೂಲಕ ಮೊದಲನೇ ಬಾರಿಗೆ ಯಶಸ್ವಿ ಚಿತ್ರ ನಿರ್ದೇಶಕರಾಗಿ ಜನಪ್ರಿಯತೆ ಗಳಿಸಿದ್ದರು. ದಿವಂಗತರು 'ಬಂಗಾರದ ಮನುಷ್ಯ', ಭೂತಯ್ಯನ ಮಗ ಅಯ್ಯು', 'ದೂರದ ಬೆಟ್ಟ' ಹೀಗೆ ಹಲವಾರು ಗುಣಾತ್ಮಕ, ಮೌಲ್ಯಯುತ, ಸಾಂಸಾರಿಕ, ಸಾಮಾಜಿಕ ಸಂದೇಶಗಳುಳ್ಳ ಯಶಸ್ವೀ ಚಿತ್ರಗಳನ್ನು ನಿರ್ದೇಶಿಸಿದ್ದು, ಸಾಮಾಜಿಕ ನಿರ್ದೇಶಕರೆಂದೇ ಖ್ಯಾತಿ ಪಡೆದಿದ್ದರು.

ಕನ್ನಡ ಚಿತ್ರರಂಗದಲ್ಲಿ ಭಾರತೀಯರ ಗ್ರಾಮೀಣ ಸೊಗಡನ್ನು ಅತ್ಯಂತ ಪರಿಣಾಮಕಾರಿಯಾಗಿ ತಮ್ಮ ಚಿತ್ರದಲ್ಲಿ ಅಭಿವ್ಯಕ್ತಗೊಳಿಸುತ್ತಿದ್ದ ಹಾಗೂ ಸಾಮಾಜಿಕ ಮತ್ತು ಸದಭಿರುಚಿ ಚಿತ್ರಗಳ ಮೂಲಕ ಕನ್ನಡ ಸಿನಿಮಾ ಜಗತ್ತಿಗೆ ಮಾನವೀಯ ಚೌಕಟ್ಟು ನಿರ್ಮಿಸಿದ್ದು. ಹಿರಿಯ ನಿರ್ದೇಶಕರು ಹಾಗೂ ನಿರ್ಮಾಪಕರಾಗಿದ್ದ ದಿವಂಗತರು 'ಪುಟ್ಟಣ್ಣ ಕಣಗಾಲ್' ಪ್ರಶಸ್ತಿ ಹಾಗೂ ಅತ್ಯುತ್ತಮ ಚಿತ್ರಕಥೆಗೆ "ರಾಜ್ಯ ಪ್ರಶಸ್ತಿ" ಹೀಗೆ ಹಲವು ಗೌರವಗಳಿಗೆ ಭಾಜನರಾಗಿದ್ದರು.

ಸಿದ್ದಲಿಂಗಯ್ಯ ಅವರು ದಿನಾಂಕ:12.03.2015 ರಂದು ನಿಧನ ಹೊಂದಿರುತ್ತಾರೆ.

2. ಡಿ. ರಾಮಾ ನಾಯ್ಡು

ಡಿ. ರಾಮಾ ನಾಯ್ಡು ಅವರು 6ನೇ ಜೂನ್, 1936 ರಂದು ಆಂಧ್ರಪ್ರದೇಶದ ಗುಂಟೂರು ಜಿಲ್ಲೆಯ ಕರಚೇಡು ಗ್ರಾಮದಲ್ಲಿ ಜನಿಸಿದ್ದ ಅವರು ಮೊದಲಿನಿಂದಲೂ ಸಿನಿಮಾ ರಂಗದಲ್ಲಿ ಆಸಕ್ತಿ ಹೊಂದಿದ್ದು ತೆಲುಗು ಚಿತ್ರರಂಗದಲ್ಲಿ ನಿರ್ಮಾಪಕರಾಗಿ, ಕನ್ನಡ ಸೇರಿದಂತೆ 13 ಭಾಷೆಗಳಲ್ಲಿ ಸುಮಾರು 150ಕ್ಕೂ ಹೆಚ್ಚು ಚಿತ್ರಗಳನ್ನು ನಿರ್ಮಿಸಿ ಅತ್ಯಧಿಕ ಚಲನಚಿತ್ರಗಳ ನಿರ್ಮಾಪಕ ಎಂಬ ಖ್ಯಾತಿ ಜೊತೆಗೆ ಗಿನ್ನಿಸ್ ದಾಖಲೆಯನ್ನು ಪಡೆದಿದ್ದರು.

ರಾಜಕೀಯದಲ್ಲೂ ಆಸಕ್ತಿ ಹೊಂದಿದ್ದ ದಿವಂಗತರು 1999ರಲ್ಲಿ ಗುಂಟೂರು ಜಿಲ್ಲೆಯಿಂದ 13ನೇ ಲೋಕಸಭೆಗೆ ಆಯ್ಕೆಯಾಗಿ ಲೋಕಸಭಾ ಸದಸ್ಯರಾಗಿ ಸೇವೆ ಸಲ್ಲಿಸಿದ್ದರು..

ಹಿರಿಯ ನಿರ್ಮಾಪಕರಾಗಿ ಆಧ್ಯಾತ್ಮಿಕ ಚಲನಚಿತ್ರಗಳನ್ನು ಬಹುಭಾಷೆಯಲ್ಲಿ ನಿರ್ಮಿಸಿ ಚಿತ್ರ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸಿದ ದಿವಂಗತರು "ಪದ್ಮಭೂಷಣ" ಹಾಗೂ "ದಾದಾ ಸಾಹೇಬ ಫಾಲ್ಕೆ" ಪ್ರಶಸ್ತಿಗಳು ಹೀಗೆ ಹಲವಾರು ಪ್ರಶಸ್ತಿಗಳನ್ನು ಮುಡಿಗೇರಿಸಿಕೊಂಡಿದ್ದರು.

ಡಿ. ರಾಮಾ ನಾಯ್ಡು ಅವರು ದಿನಾಂಕ:18.02.2015 ರಂದು ನಿಧನ ಹೊಂದಿರುತ್ತಾರೆ.

ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯಮಂತ್ರಿಗಳು):– ಮಾನ್ಯ ಅಧ್ಯಕ್ಷರೆ, ಮಾನ್ಯ ಸಿದ್ದಲಿಂಗಯ್ಯನವರು ತಾವು ಈಗಾಗಲೇ ಪ್ರಸ್ತಾಪ ಮಾಡಿರುವಂತೆ ಕನ್ನಡ ಚಿತ್ರರಂಗ ಕಂಡಂತಹ ಒಬ್ಬ ಪ್ರತಿಭಾವಂತ ನಿರ್ದೇಶಕರಾದ್ದರು. ಶ್ರೀಯುತರು ಸಾಮಾನ್ಯ ಹಳ್ಳಿಯಲ್ಲಿ ಹುಟ್ಟಿ ಬದುಕನ್ನು ಚೆನ್ನಾಗಿ ಅನುಭವಿಸಿ ಅರ್ಥ ಮಾಡಿಕೊಂಡಿದ್ದರು. ಇವರ ಎಲ್ಲಾ ಚಿತ್ರಗಳಲ್ಲಿಯೂ ಕೂಡ ಹಳ್ಳಿ ಬದುಕಿನ ಸೊಗಡನ್ನು ನಾವು ನೋಡುವುದಕ್ಕೆ ಸಾಧ್ಯವಾಯಿತು. ಅದು "ಭೂತಯ್ಯನ ಮಗ ಅಯ್ಯು" ಇರಬಹುದು, "ಬಂಗಾರದ ಮನುಷ್ಯ" ಇರಬಹುದು, "ಮೇಯರ್ ಮುತ್ತಣ್ಣ" ಇನ್ನು ಅನೇಕ ಸಿನಿಮಾಗಳನ್ನು ನಿರ್ದೇಶಿಸಿದ್ದರು. ಸುಮಾರು 23 ಸಿನಿಮಾಗಳನ್ನು ನಿರ್ದೇಶನ ಮಾಡಿದ್ದಾರೆ. ಇವರ ಎಲ್ಲಾ ಚಿತ್ರಗಳಲ್ಲಿಯೂ ಕೂಡ ಒಂದು ಸಾಮಾಜಿಕ ಕಳಕಳಿ, ಸಮಾಜಕ್ಕೆ ಬೇಕಾದಂತಹ ಒಂದು ಮೌಲ್ಯ, ಸಂದೇಶ ಜನರಿಗೆ ತಿಳಿಸುವಂತಹ ಪ್ರಯತ್ನವನ್ನು ಎಲ್ಲಾ ಚಿತ್ರಗಳಲ್ಲಿಯೂ ಕೂಡ ಮಾಡಿದ್ದಾರೆ. ಹಾಗಾಗಿ ಕನ್ನಡ ಚಿತ್ರರಂಗ ಕಂಡಂತಹ ಒಬ್ಬ ಅಪರೂಪದ ನಿರ್ದೇಶಕರಾಗಿದ್ದರೂ ಕೂಡ ನಾವು ಅವರನ್ನು ಸ್ಮರಣೆ ಮಾಡಿಕೊಳ್ಳಬೇಕಾಗುತ್ತದೆ. ಶ್ರೀಯುತರು ಒಂದು ವಾರದ ಹಿಂದೆ ನಿಧನ ಹೊಂದಿದ್ದಾರೆ. ಸುಮಾರು 80 ವರ್ಷಗಳ ಕಾಲ ಬದುಕಿದ್ದರು. ಅವರ ಮಗನೂ ಕೂಡ ಒಬ್ಬ ಚಲನಚಿತ್ರ ನಟರಾಗಿದ್ದರು.

ಅವರು ಕೂಡ ಅಕಾಲಿಕ ಮರಣಕ್ಕೆ ತುತ್ತಾಗಿದ್ದರು. ಇದರಿಂದ ಅವರ ಮನಸ್ಸಿಗೆ ನೋವಾಗಿತ್ತು. ಹಾಗಾಗಿ ಅವರು ಕೊನೆಯ ದಿನಗಳಲ್ಲಿ ಆರೋಗ್ಯ ಕೆಟ್ಟು ದೀರ್ಘಕಾಲ ಕನ್ನಡ ಚಲನಚಿತ್ರಕ್ಕೆ ಸೇವೆಯನ್ನು ಮಾಡಿ ನಮ್ಮನ್ನೆಲ್ಲಾ ಅಗಲಿದ್ದಾರೆ. ಬಹುಶಃ ಸಿದ್ದಲಿಂಗಯ್ಯನವರು ಮತ್ತೆ ಈ ರೀತಿ ಒಂದು ಸಾಮಾಜಿಕ, ಸಾಂಸಾರಿಕ ಸಿನಿಮಾಗಳಿಗೆ ಹೆಚ್ಚು ಒತ್ತು ಕೊಟ್ಟು ಒಂದು ಸಂದೇಶ ಕೊಡುವಂತಹ ನಿರ್ದೇಶಕರು ಅಪರೂಪ, ಹಾಗಾಗಿ ಇವರು ವಿರಳವಾದಂತಹ ನಿರ್ದೇಶಕರಾಗಿದ್ದರೆಂದು ನಾನು ಈ ಸಂದರ್ಭದಲ್ಲಿ ಸ್ಮರಿಸಿಕೊಂಡು ಇವರಿಗೆ ಅನೇಕ ಪ್ರಶಸ್ತಿಗಳು ಕೂಡ ಸಿಕ್ಕಿವೆ. ಅವರ ಆತ್ಮಕ್ಕೆ ಚಿರಶಾಂತಿಯನ್ನು ಕೋರಿ ಅವರ ಕುಟುಂಬ ವರ್ಗದವರಿಗೆ ಅವರ ಸಾವಿನ ದುಃಖವನ್ನು ಭರಿಸುವ ಶಕ್ತಿಯನ್ನು ಕೊಡಲಿ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ಡಿ. ರಾಮಾ ನಾಯ್ಡು ಇವರು ಆಂಧ್ರಪ್ರದೇಶದವರಾಗಿದ್ದು ಸಿನಿಮಾ ನಿರ್ಮಾಣ ಮಾಡುವುದರಲ್ಲಿ ಗಿನ್ನಿಸ್ ದಾಖಲೆಯನ್ನು ಮಾಡಿದ್ದರು. ಭಾರತೀಯ ಭಾಷೆಗಳಲ್ಲಿ ಸುಮಾರು 13 ಭಾಷೆಗಳಲ್ಲಿ ಚಿತ್ರಗಳನ್ನು ನಿರ್ಮಾಣ ಮಾಡಿದ್ದರು. ಬಹುಶಃ ಇಡೀ ಭಾರತದಲ್ಲಿ 150 ಸಿನಿಮಾಗಳನ್ನು ಬೇರೆ ಬೇರೆ ಭಾಷೆಗಳಲ್ಲಿ ನಿರ್ಮಾಣ ಮಾಡಿರುವಂತಹ ಇನ್ನೊಬ್ಬ ನಿರ್ಮಾಪಕರು ಇಲ್ಲ. ಇವರು ನಿರ್ಮಾಣ ಮಾಡುವುದರಲ್ಲಿ ತಮ್ಮದೇ ಆದಂತಹ ದೊಡ್ಡ ದಾಖಲೆಯನ್ನು ನಿರ್ಮಾಣ ಮಾಡಿದ್ದಾರೆ. ಇವರು ಲೋಕಸಭಾ ಸದಸ್ಯರಾಗಿಯೂ ಕೂಡ ಕೆಲಸ ಮಾಡಿದ್ದಾರೆ. ಇವರು 1999ರಲ್ಲಿ ಗುಂಟೂರು ಜಿಲ್ಲೆಯಿಂದ ಒಮ್ಮೆ ಲೋಕಸಭೆಗೆ ಆಯ್ಕೆಯಾಗಿ ಸಾರ್ವಜನಿಕ ಜೀವನದಲ್ಲಿಯೂ ಕೂಡ ತಮ್ಮನ್ನು ತಾವು ತೊಡಗಿಸಿಕೊಂಡಿದ್ದರು. ಶ್ರೀಯುತರಿಗೆ "ಪದ್ಮಭೂಷಣ" ಮತ್ತು "ದಾದಾ ಸಾಹೇಬ ಫಾಲ್ಕೆ" ಪ್ರಶಸ್ತಿಯೂ ಕೂಡ ದೊರಕಿತ್ತು. ಇವರು ಇತ್ತೀಚೆಗೆ ನಿಧನರಾಗಿದ್ದಾರೆ. ಇವರ ಆತ್ಮಕ್ಕೆ ಶಾಂತಿಯು ದೊರಕಲಿ ಮತ್ತು ಇವರ ಕುಟುಂಬ ವರ್ಗದವರಿಗೆ ಅವರ ಸಾವಿನ ದುಃಖವನ್ನು ಭರಿಸುವ ಶಕ್ತಿಯನ್ನು ನೀಡಲಿ ಎಂದು ಪ್ರಾರ್ಥನೆ

ಮಾಡಿ ತಾವು ತಂದಿರುವಂತಹ ಸಂತಾಪ ಸೂಚನೆ ನಿರ್ಣಯವನ್ನು ಬೆಂಬಲಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ವಿರೋಧಪಕ್ಷದ ನಾಯಕರು):– ಮಾನ್ಯ ಅಧ್ಯಕ್ಷರೆ, ತಾವು ತಂದಿರುವಂತಹ ಸಂತಾಪ ಸೂಚನೆಗೆ ಬೆಂಬಲವನ್ನು ವ್ಯಕ್ತಪಡಿಸಿ ಮಾನ್ಯ ಸಿದ್ದಲಿಂಗಯ್ಯನವರು ಇತ್ತೀಚೆಗೆ ನಮ್ಮನ್ನು ಅಗಲಿದ್ದಾರೆ. ಬಹುಶಃ ಸಿದ್ದಲಿಂಗಯ್ಯನವರ ಹೆಸರು ಕನ್ನಡನಾಡಿನಲ್ಲಿ ಎಲ್ಲರಿಗೂ ಪರಿಚಯ ಇರುವಂತಹ ಹೆಸರಾಗಿದೆ. ಶ್ರೀಯುತರು ಒಬ್ಬ ಉತ್ತಮ ನಿರ್ದೇಶಕರಾಗಿ, ಸಾಮಾಜಿಕ ಹಿನ್ನೆಲೆ ಇರುವಂತಹ ಚಲನಚಿತ್ರಗಳನ್ನು ನಿರ್ದೇಶನ ಮಾಡಿ ಅದು ಜನಮಾನಸದಲ್ಲಿ ಉಳಿಯುವಂತಹ ರೀತಿಯಲ್ಲಿ ಕೆಲಸ ಮಾಡಿರುವಂತಹವರು ಸಿದ್ದಲಿಂಗಯ್ಯನವರಾಗಿದ್ದಾರೆ. ಬಹುಶಃ ಅವರು ನಿರ್ದೇಶನ ಮಾಡಿರುವಂತಹ ಕೆಲವೊಂದು ಪ್ರಮುಖ ಚಲನಚಿತ್ರಗಳು ಇವತ್ತಿಗೂ ಕೂಡ ಕನ್ನಡಿಗರ ಮನಸ್ಸಿನಲ್ಲಿ ಉಳಿದಿದೆ. ಅದರಲ್ಲಿ "ಮೇಯರ್ ಮುತ್ತಣ್ಣ" ಇರಬಹುದು, "ಬಂಗಾರದ ಮನುಷ್ಯ", "ಭೂತಯ್ಯನ ಮಗ ಅಯ್ಯು", "ದೂರದ ಬೆಟ್ಟ" ಈ ಎಲ್ಲಾ ಚಲನಚಿತ್ರಗಳು ಯಾವಾಗಲೂ ಕೂಡ ಕನ್ನಡ ಚಲನಚಿತ್ರ ಎಲ್ಲಿಯವರೆವಿಗೆ ಇರುತ್ತದೆಯೋ ಅಲ್ಲಿಯವರೆವಿಗೆ ಇದು ಸದಾ ನೆನಪಿನಲ್ಲಿರುವಂತಹ ಒಂದು ಸ್ಮರಣೀಯವಾದ ದಿನ ಎಂದು ಹೇಳಬಹುದು. "ಬಂಗಾರದ ಮನುಷ್ಯ" ಚಲನಚಿತ್ರವು ಕರ್ನಾಟಕ ಚಲನಚಿತ್ರರಂಗದ ಇತಿಹಾಸದಲ್ಲಿ ಒಂದು ವರ್ಷಗಳ ಕಾಲ ಪ್ರದರ್ಶನ ಕಂಡು ಇನ್ನು ಹೆಚ್ಚಿನ ದಿನಗಳ ಕಾಲ ಪ್ರದರ್ಶನ ಕಂಡು ಬಹುಶಃ ಕನ್ನಡ ಚಲನಚಿತ್ರರಂಗದಲ್ಲಿಯೇ ಒಂದು ಇತಿಹಾಸ ನಿರ್ಮಾಣ ಮಾಡಿರುವಂತಹ ಚಿತ್ರ ಬಂಗಾರದ ಮನುಷ್ಯ ಆಗಿದೆ. ಬಹುಶಃ ಆ ಬಂಗಾರದ ಮನುಷ್ಯ ಚಲನಚಿತ್ರವನ್ನು ನೋಡಲಾರದಂತಹ ಕನ್ನಡಿಗರು ಯಾರು ಇರುವುದಿಲ್ಲವೆಂದು ನನಗನಿಸುತ್ತದೆ. ಆಗ ನಾವೆಲ್ಲರೂ ಚಿಕ್ಕವರಾಗಿದ್ದೆವು. ನಾನು 50 ಸಲ, 100 ಸಲ ಮತ್ತು 150 ಸಲ "ಬಂಗಾರದ ಮನನುಷ್ಯ" ಚಿತ್ರವನ್ನು ನೋಡಿದ್ದೇನೆ ಎನ್ನುವಂತಹ ರೀತಿಯಲ್ಲಿ ಆ trend ಇತ್ತು. ನಮಗೆ ಕೆಲವರು ಹೇಳುತ್ತಿದ್ದರು, ಅದಕ್ಕೆ ಆ ಹಿನ್ನೆಲೆಯೂ ಸಹ ಇತ್ತು. ಒಂದು

ಹಳ್ಳಿಗಾಡಿನ ಮತ್ತು ನಮ್ಮ ಹಳ್ಳಿಯ ಸಂಸ್ಕೃತಿ ಮತ್ತು ಪರಂಪರೆಯನ್ನು ಎತ್ತಿಹಿಡಿಯುವಂತಹದ್ದು ಮತ್ತು ಶ್ರಮ ಜೀವನದಿಂದ "ಕಾಯಕವೇ ಕೈಲಾಸ" ಎನ್ನುವಂತಹ ರೀತಿಯಲ್ಲಿ ಬದುಕಬೇಕೆಂಬ ಒಂದು ಸಂದೇಶ ಇವೆಲ್ಲವೂ ಕೆಲವೊಂದು ಜನರಲ್ಲಿ ಅದೊಂದು ಮಾನಸಿಕವಾಗಿ ಬದಲಾವಣೆಯನ್ನು ತರುವಂತಹದ್ದು ಕೂಡ ಈ ಚಲನಚಿತ್ರ ನೋಡಿರುವುದರಿಂದಾಗಿ ಆಗಿದೆ. ಎಷ್ಟೋ ಜನರಲ್ಲಿ ಪರಿವರ್ತನೆಯನ್ನು ತರುವಂತಹ ಕೆಲಸವೂ ಕೂಡ ಆಗಿದೆ. ಈ ರೀತಿಯಾಗಿ ಸಾಮಾಜಿಕವಾಗಿ ಇವತ್ತು ನಾವು ಚಲನಚಿತ್ರಗಳ ಬಗ್ಗೆ ಮಾತನಾಡಿದಾಗ ನಮಗೆ ಏನು ಅನಿಸುತ್ತದೆ ಎಂದರೆ ಅದರಿಂದ ದುಷ್ಪರಿಣಾಮಗಳೂ ಬಹಳಷ್ಟು ಆಗುತ್ತವೆ ಎನ್ನುವುದರ ಬಗ್ಗೆ ನಾವು ವಿಚಾರ ಮಾಡುತ್ತೇವೆ. ಆದರೆ ಈ "ಬಂಗಾರದ ಮನುಷ್ಯ" ಚಲನಚಿತ್ರದ ಮುಖಾಂತರ ದುಷ್ಪರಿಣಾಮವಲ್ಲ ಒಳ್ಳೆಯ ಪರಿಣಾಮವೂ ನಮ್ಮ ನಾಗರೀಕರಲ್ಲಿ ಆ ಜನರಲ್ಲಿ ಮತ್ತು ಹಳ್ಳಿಗಾಡಿನಲ್ಲಿ ಆಗಿರುವುದನ್ನು ನಾವು ನೋಡಿದ್ದೇವೆ. ಎಷ್ಟೋ ಜನರು ಕೃಷಿಯನ್ನು ಬಿಟ್ಟು ಹೊರಗೆ ಬರುತ್ತಿದ್ದವರು ಮತ್ತೆ ಕೃಷಿ ಕಡೆಗೆ ಹೋಗಿರುವುದನ್ನು ಕೂಡ ನಾವು ನೋಡಿದ್ದೇವೆ. ಈ ರೀತಿಯಾಗಿ ಜನ ಮಾನಸದಲ್ಲಿ ಪರಿವರ್ತನೆಯನ್ನು ತರುವಂತಹ ಮತ್ತು ಸಮಾಜದಲ್ಲಿ ಪರಿವರ್ತನೆ ಮಾಡುವಂತಹ ಬಹುಶಃ ಈ ರೀತಿಯಾದಂತಹ ಚಲನಚಿತ್ರವು ಇವತ್ತು ಅವಶ್ಯಕತೆ ಇದೆ. ಅದಕ್ಕೆ ಹೊರತಾಗಿ ಇವತ್ತು ಈ ಒಂದು ಹಿಂಸಾತ್ಮಕ ಹಲವಾರು ಘಟನೆಗಳು, criminalಗೆ ಹೆಚ್ಚು ಒತ್ತು ಕೊಡುವಂತಹದ್ದು ಈ ರೀತಿಯಾದಂತಹ ಘಟನೆಗಳನ್ನು -ಸಹ- ನಾವು ನೋಡುತ್ತಿದ್ದೇವೆ. ಇವತ್ತು ಸಾಮಾಜಿಕ ಬದಲಾವಣೆ ತರುವಂತ ಕೆಲಸ ಸಿದ್ದಲಿಂಗಯ್ಯನವರ ಚಲನಚಿತ್ರದ ಮೂಲಕ ಆಯಿತು. "ಭೂತಯ್ಯನ ಮಗ ಅಯ್ಯು" ಚಲನಚಿತ್ರ ಇರಬಹುದು, "ದೂರದ ಬೆಟ್ಟ" ಚಲನಚಿತ್ರ ಇರಬಹುದು. ಹಲವಾರು ಚಲನಚಿತ್ರಗಳನ್ನು ಈ ರೀತಿ ಗ್ರಾಮೀಣ ಬದುಕಿನ ಹಿನ್ನೆಲೆಯನ್ನು ಇಟ್ಟುಕೊಂಡು ನಿರ್ಮಾಣ ಮಾಡಿರುವುದು ಸಿದ್ದಲಿಂಗಯ್ಯನವರ ಪ್ರತಿಭೆ ಎಂದು ನಾನು ಹೇಳುತ್ತಿದ್ದೇನೆ. ಇಂಥ ಪ್ರತಿಭಾವಂತರು ನಮ್ಮ ಮಧ್ಯೆದಲ್ಲಿ ಇವತ್ತು ಇಲ್ಲ. ಹಾಗಾಗಿ ಇವತ್ತು ಅವರ ಇಂಥ ನಿರ್ದೇಶನ ದಾಟಿದೆ. ಬಹುಶಃ ಎಲ್ಲಾ ಯುವ ನಿರ್ದೇಶಕರು,

ಚಲನಚಿತ್ರಕ್ಕೆ ಬರುವಂಥವರು ಬಹುಶಃ ಆದರ್ಶಪ್ರಾಯ ಎನ್ನುವಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇಂಥ ಹಿರಿಯರು ಇಳಿ ವಯಸ್ಸಿನಲ್ಲಿ ಮೃತಪಟ್ಟರು. ಆದರೆ ಕೊನೆ ದಿನಗಳಲ್ಲಿ ಅವರು H1 N1 ರೋಗಕ್ಕೆ ಬಲಿಯಾದರು. H1 N1 ರೋಗದ ಬಗ್ಗೆ ಪ್ರತ್ಯೇಕವಾಗಿ ಸದನದಲ್ಲಿ ಚರ್ಚೆ ಮಾಡುತ್ತೇವೆ. ಇವತ್ತು ಈ ರೋಗ ದೇಶದಲ್ಲಿ, ರಾಜ್ಯದಲ್ಲಿ ಯಾವ ರೀತಿ spread ಆಗುತ್ತಿದೆ ಎಂಬ ಬಗ್ಗೆ ನಾವು ಪ್ರತ್ಯೇಕವಾಗಿ ಈ ಸದನದಲ್ಲಿ ಚರ್ಚೆ ಮಾಡೋಣ. ಇವರು ಇಂಥ ರೋಗಕ್ಕೆ ಬಲಿಯಾಗಬೇಕಾಯಿತು ಎನ್ನುವಂಥ ಕೊರಗು ನಮಗೆ ಇದೆ ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಅವರ ಆತ್ಮಕ್ಕೆ ನಾನು ಶಾಂತಿಯನ್ನು ಕೋರುತ್ತಿದ್ದೇನೆ. ದಿವಂಗತ ಡಿ. ರಾಮಾನಾಯ್ಡುರವರು ಬಹುಶಃ ಅವರು ಆಂಧ್ರ ಪ್ರದೇಶದವರು ಮತ್ತು ಒಂದು ಬಾರಿ ಲೋಕಸಭಾ ಸದಸ್ಯರಾಗಿ ಕೆಲಸ ಮಾಡಿರುವಂಥವರು. ರಾಮಾನಾಯ್ಡುರವರು 150ಕ್ಕೂ ಹೆಚ್ಚು ಚಲನಚಿತ್ರಗಳನ್ನು ನಿರ್ಮಾಣ ಮಾಡಿ ಗಿನ್ನಿಸ್ ದಾಖಲೆ ನಿರ್ಮಾಣ ಮಾಡಿರುತ್ತಾರೆ. ಹೀಗಾಗಿ ಚಲನಚಿತ್ರ ರಂಗಕ್ಕೆ ಅತಿ ಹೆಚ್ಚಿನ ಕೊಡುಗೆಯನ್ನು ಕೊಟ್ಟಂಥವರು ಈ ರಾಮಾನಾಯ್ಡರವರ ಆತ್ಮಕ್ಕೂ ಸಹಿತ ನಾನು ಶಾಂತಿಯಯನ್ನು ಕೋರುತ್ತೇನೆ. ಇದರೊಂದಿಗೆ ಮತ್ತೊಂದು ವಿಷಯದ ಬಗ್ಗೆ ಮಾನ್ಯ ಸಭಾಧ್ಯಕ್ಷರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ ಶ್ರೀಮತಿ ಪ್ರಭಾ ಅರುಣ್‌ಕುಮಾರ್, ಇತ್ತೀಚೆಗೆ ಆಸ್ಟ್ರೇಲಿಯಾ ದೇಶದಲ್ಲಿ ಕೊಲೆಗೀಡಾಗಿ ಹತ್ಯೆಯಾದರು, ಅದು ಇಡೀ ಜಗತ್ತಿನಲ್ಲಿ ನಮ್ಮ ರಾಷ್ಟ್ರದಲ್ಲಿ, ನಮ್ಮ ರಾಜ್ಯದಲ್ಲಿ ಸಾರ್ವಜನಿಕವಾಗಿ ಚರ್ಚೆಯಾಗುತ್ತಿದೆ. ಅದರ ಬಗ್ಗೆ ಪರಸ್ಪರ ಸರ್ಕಾರಗಳಲ್ಲಿ ಸಹಿತ ಆ ಕೊಲೆಯ ಹಿಂದೆ ಯಾರಿದ್ದಾರೆ, ಏನಾಗಿದೆ ಎಂಬ ಎಲ್ಲಾ ನಿಗೂಢತೆಯ ಬಗ್ಗೆ ಪ್ರಶ್ನೆ ಮಾಡುವುದು, ಅದರ ಬಗ್ಗೆ challenge ಮಾಡುವುದು ಇವೆಲ್ಲಾ ನಡೆಯುತ್ತಿದೆ. ವಿದೇಶದಲ್ಲಿ ನಮ್ಮ ಕರ್ನಾಟಕದವರು ಸಾಕಷ್ಟು ಜನ ನೌಕರಿ ಮಾಡಲಿಕ್ಕೆ ಹೋಗುತ್ತಿದ್ದಾರೆ. ಅವರ Security ಬಗ್ಗೆ, ಸುರಕ್ಷತೆ ಬಗ್ಗೆ ಕೂಡ ಚಿಂತನೆ ಮತ್ತು ಚರ್ಚೆ ನಮ್ಮ ದೇಶದಲ್ಲಿ, ನಾಡಿನಲ್ಲಿ ಆಗಬೇಕಾಗಿದೆ. ಒಬ್ಬ ಮಹಿಳೆ ವಿದೇಶವಾದ ಆಸ್ಟ್ರೇಲಿಯಾದಲ್ಲಿ ಹೋಗಿ ಕೆಲಸ

ಮಾಡುವಂಥ ಸಂದರ್ಭದಲ್ಲಿ ಇವತ್ತು ಕೊಲೆಗೀಡಾಗಿ ಹತ್ಯೆಯಾಗಿರುವುದು ದಾರುಣವಾದ ಘಟನೆ. ಅವರ ಬಗ್ಗೆ ಕೂಡ ಸಂತಾಪ ಸೂಚನೆಯನ್ನು ತಾವು ತರಬೇಕೆಂದು ನಾನು ಈ ಸಂದರ್ಭದಲ್ಲಿ ವಿನಂತಿಯನ್ನು ಮಾಡಿಕೊಂಡು ಈ ಎಲ್ಲಾ ಮೃತಪಟ್ಟಂಥ ವ್ಯಕ್ತಿಗಳ ಆತ್ಮಕ್ಕೆ ಶಾಂತಿಯನ್ನು ಕೋರಿ ಅವರ ಕುಟುಂಬದ ಸದಸ್ಯರಿಗೆ ಇವರ ಅಗಲಿಕೆಯ ದುಃಖವನ್ನು ಭರಿಸುವಂಥ ಶಕ್ತಿಯನ್ನು ಕೊಡಲಿ ಎಂದು ಹೇಳಿ ದೇವರಲ್ಲಿ ಪ್ರಾರ್ಥನೆಯನ್ನು ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ವೈ.ಎಸ್.ವಿ. ದತ್ತ (ಕಡೂರು):– ಮಾನ್ಯ ಸಭಾಧ್ಯಕ್ಷರೆ, ಇತ್ತೀಚೆಗೆ ಅಗಲಿದ ಚಲನಚಿತ್ರ ರಂಗದ ಎರಡು ದೈತ್ಯ ಪ್ರತಿಭೆಗಳ ಬಗ್ಗೆ ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು ಮತ್ತು ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಿದ್ದಾರೆ. ಅವರಿಬ್ಬರ ಆತ್ಮಕ್ಕೂ ಕೂಡ ಶಾಂತಿ ಸಿಗಲಿ ಎಂದು ಹೇಳುತ್ತಾ ವಿಶೇಷವಾಗಿ ಸಿದ್ದಲಿಂಗಯ್ಯನವರ ಬಗ್ಗೆ ಮಾತನಾಡಬೇಕಾದರೆ ಚಲನಚಿತ್ರ ಮಾಧ್ಯಮ ಆರೋಗ್ಯಕರವಾದಂಥ ಒಂದು ಸಮಾಜ ನಿರ್ಮಾಣಕ್ಕೆ ಬಹಳ ಪ್ರಬಲವಾದ ಅಸ್ತ್ರ ಎಂದು ಸಿದ್ದಲಿಂಗಯ್ಯನವರು ತೋರಿಸಿಕೊಟ್ಟರು. ಇತ್ತೀಚಿನ ದಿನಗಳಲ್ಲಿ ಚಲನಚಿತ್ರ ರಂಗದ ಬಗ್ಗೆ ಬೇರೆ ರೀತಿಯ ಅಭಿಪ್ರಾಯಗಳು ಬರುತ್ತಿರುವ ಸಂದರ್ಭದಲ್ಲಿ ಸಿದ್ದಲಿಂಗಯ್ಯನವರು ಹೆಚ್ಚು ಪ್ರಸ್ತುತರಾಗುತ್ತಾರೆಂದು ನನಗೆ ಅನ್ನಿಸುತ್ತಿದೆ. ಇವತ್ತು ಕೂಡ ಸಹಪಂಕ್ತಿ ಭೋಜನ, ಮಂದಿರ ಪ್ರವೇಶ, ಇಂಥ ವಿಷಯಗಳು ಆಗಾಗ್ಗೆ ನಮ್ಮ ಸಮಾಜದೊಳಗೆ ಒಂದು ರೀತಿಯ ಪ್ರಕ್ಷುಬ್ಧ ವಾತಾವರಣ ಉಂಟು ಮಾಡುವಂಥದ್ದು ಮತ್ತು ತಾರತಮ್ಯವನ್ನು ಇನ್ನೂ ಹೆಚ್ಚು ಮಾಡುವಂಥ ಸಂದರ್ಭದಲ್ಲಿ 1970–80ರ ದಶಕದಲ್ಲಿಯೇ ಸಿದ್ಧಲಿಂಗಯ್ಯನವರು ಡಾ॥ ಗೊರೂರು ರಾಮಸ್ವಾಮಿಯವರ ಹೇಮಾವತಿ ಎಂಬ ಕಾದಂಬರಿಯನ್ನು ಆಧರಿಸಿ "ಹೇಮಾವತಿ" ಎಂಬ ಚಿತ್ರವನ್ನು ನಿರ್ಮಾಣ ಮಾಡಿದಾಗ ಇಡೀ ಕರ್ನಾಟಕದಲ್ಲಿಯೇ ಒಂದು ಹೊಸ ಆರೋಗ್ಯಕರವಾದ ಚಿಂತನೆ ಪ್ರಾರಂಭವಾಯಿತು. ಆ ದಿನಗಳಲ್ಲಿಯೇ ಸಹಪಂಕ್ತಿ ಭೋಜನ, ಮಂದಿರ ಪ್ರವೇಶ ಇಂಥದ್ದರ ಬಗ್ಗೆ ಒಂದು ಕಲ್ಮಶ ಮನಸ್ಸುಗಳು ಕೂಡ

ತಿಳಿಯಾಗುವಂಥ ಪ್ರಯತ್ನ ಆಯಿತು. ಹಾಗಾಗಿ "ಭೂತಯ್ಯನ ಮಗ ಅಯ್ಯು", "ಬಂಗಾರದ ಮನುಷ್ಯ"ನ ಬಗ್ಗೆ ಹೇಳಿದ್ದಾರೆ. ನಾನು ಒಂದು ಮಾತನ್ನು ಹೇಳುತ್ತೇನೆ. ಇತ್ತೀಚಿನ ದಿನಗಳಲ್ಲಿ ನಮ್ಮ ಚಲನಚಿತ್ರ ನಿರ್ಮಾಪಕರು, ನಿರ್ದೇಶಕರುಗಳಿಗೆ ಎಲ್ಲೋ ಒಂದು ಕಡೆ ಕನ್ನಡ ಸಾಹಿತ್ಯದ ಬಗ್ಗೆ ಅನಾಸಕ್ತಿ ಮೂಡುತ್ತಿದೆ. ಸಿದ್ದಲಿಂಗಯ್ಯನವರ ಸಮಕಾಲೀನರಾದ ಹಿಂದಿನ ನಿರ್ದೇಶಕರುಗಳು ಉತ್ತಮವಾದ ಕನ್ನಡದ ಕಾದಂಬರಿಗಳನ್ನು ಚಲನಚಿತ್ರಗಳ ರೂಪದಲ್ಲಿ ತೋರಿಸುವಂಥ ಪ್ರಯತ್ನವನ್ನು ಮಾಡುತ್ತಿದ್ದರು. ಇವರು ನಿರ್ಮಾಣ ಮಾಡಿದ ಚಲನಚಿತ್ರಗಳೆಲ್ಲಾ ಏಕೆ ಯಶಸ್ವಿಯಾಗಿದೆ ಎಂದರೆ ಅವರು ಕನ್ನಡದ ಮೇರುಕೃತಿಗಳಾದಂತಹ ಸಾಹಿತ್ಯದ ಕಾದಂಬರಿಗಳನ್ನು ಆಧರಿಸಿ ಚಲನಚಿತ್ರ ಮಾಡಿದ್ದರಿಂದ ಯಶಸ್ವಿಯಾಗಿದೆ. ಈಗೇನಾಗಿದೆ ಎಂದರೆ ಆ ಕನ್ನಡ ಸಾಹಿತ್ಯವನ್ನು ಆ ಚಲನಚಿತ್ರದ ಮೂಲಕ ಜನಮನಕ್ಕೆ ಮುಟ್ಟಿಸುವಂಥ ಪ್ರಯತ್ನಕ್ಕೆ ಈಗಿನ ನಿರ್ದೇಶಕರು ಹಿಂದಿನ ನಿರ್ದೇಶಕರುಗಳು ಇಟ್ಟುಕೊಂಡಿದ್ದ ಪರಿಪಾಠಕ್ಕೆ ಮತ್ತೆ ಏಕೆ ಚಾಲನೆ ಕೊಡಬಾರದು ಎಂಬ ಬಗ್ಗೆ ಒಂದು ಚರ್ಚೆ ಆ ವಲಯದಲ್ಲಿ ಆಗುವುದು ಒಳ್ಳೆಯದು ಎಂದು ಸಲಹೆ ಕೊಡುತ್ತೇನೆ. ಸಿದ್ದಲಿಂಗಯ್ಯನವರಿಗೂ ನನಗೂ ತುಂಬಾ ವೈಯಕ್ತಿಕವಾದ ಸ್ನೇಹ ಸಂಬಂಧ. ನಮ್ಮ ಪಕ್ಕದ ಮನೆಯಲ್ಲಿದ್ದಂಥವರು. ಅಷ್ಟೇ ಅಲ್ಲ, ಅವರ ಇಬ್ಬರ ಮಕ್ಕಳು ಕೂಡ ನನ್ನ ಹತ್ತಿರ ಪಾಠಕ್ಕೆ ಬರುತ್ತಿದ್ದರು. ಹಾಗಾಗಿ ನಾನು ಅವರ ಕುಟುಂಬಕ್ಕೆ ಮೇಷ್ಟ್ರು ಆಗಿ ಕೆಲಸ ಮಾಡಿದವನು. ಚಲನಚಿತ್ರ ನಟನಾಗಿ ಅಕಾಲ ಮೃತ್ಯುವಿಗೆ ತುತ್ತಾದ ಮುರಳಿ ಮತ್ತು ಅವರ ಇನ್ನೊಬ್ಬ ಮಗ ಇಬ್ಬರೂ ಕೂಡ ನನ್ನ ಹತ್ತಿರ ಪಾಠಕ್ಕೆ ಬರುತ್ತಿದ್ದರು. ಹಾಗಾಗಿ ಗಂಡಹೆಂಡತಿ ಇಬ್ಬರೂ ಸದಾ ನನ್ನ ಮನೆಗೆ ಬಂದು ಅವರ ಮಕ್ಕಳ ಶಿಕ್ಷಣದ ಭವಿಷ್ಯದ ಬಗ್ಗೆ ಚರ್ಚೆ ಮಾಡುತ್ತಿದ್ದರು. ನಾನು ನನ್ನ ಕುಟುಂಬದ ಅತ್ಯಂತ ಆತ್ಮೀಯರಾದಂಥ ಹಿರಿಯರನ್ನು ಕಳೆದುಕೊಂಡಂಥ ಭಾವನೆ ನನಗೆ ಬರುತ್ತಿದೆ. ಹಾಗಾಗಿ ಅವರ ಆತ್ಮಕ್ಕೆ ಶಾಂತಿಯನ್ನು ಕೋರುತ್ತೇನೆ

ಅಧ್ಯಕ್ಷರು:– ಈಗ ಮೃತರ ಗೌರವಾರ್ಥ ಒಂದು ನಿಮಿಷ ಮೌನವನ್ನು ಆಚರಿಸಬೇಕೆಂದು ನಾನು ತಮ್ಮಲ್ಲಿ ಕೋರುತ್ತೇನೆ.

(ಈ ಹಂತದಲ್ಲಿ ಮೃತರ ಗೌರವಾರ್ಥ ಸದನದಲ್ಲಿ ಒಂದು ನಿಮಿಷ ಮೌನಾಚರಣೆ ಮಾಡಲಾಯಿತು)

2. ನಿಲುವಳಿ ಸೂಚನೆ ಮಂಡನೆಗೆ ಅವಕಾಶ ಕೋರಿಕೆ

ವಿಷಯ: ಕುಡಿಯುವ ನೀರಿನ ಸಮಸ್ಯೆ ಬಗ್ಗೆ.

ಶ್ರಿ ಜಗದೀಶ್ ಶೆಟ್ಟರ್ (ಮಾನ್ಯ ವಿರೋಧ ಪಕ್ಷದ ನಾಯಕರು):– ಮಾನ್ಯ ಸಭಾಧ್ಯಕ್ಷರೆ, ಕುಡಿಯುವ ನೀರಿನ ಸಮಸ್ಯೆ ಬಗ್ಗೆ ನಾನು ಒಂದು ನಿಲುವಳಿ ಸೂಚನೆಯನ್ನು ಕೊಟ್ಟಿದ್ದೆನು. ಈ ಕುಡಿಯುವ ನೀರಿನದು ಜ್ವಲಂತ ಸಮಸ್ಯೆಯಾಗಿದ್ದು ಎಲ್ಲಾ ಕಡೆ ಹಾಹಾಕಾರ ಪ್ರಾರಂಭವಾಗಿದೆ..

ಅಧ್ಯಕ್ಷರು:– ಒಂದೇ ಒಂದು ಸೆಕೆಂಡ್, ಮಾನ್ಯ ವಿರೋಧ ಪಕ್ಷದ ನಾಯಕರೆ, ತಾವು ಈ ಸ್ಥಾನದಲ್ಲಿ ಕುಳಿತು ಕೆಲಸ ಮಾಡಿದಂಥವರು, ಇಂದಿನಿಂದ ನಮ್ಮ ಬಜೆಟ್ ಬಗ್ಗೆ ಚರ್ಚೆಯಾಗುತ್ತಿದೆ. ಇದರಲ್ಲಿ ಯಾವ ವಿಷಯದ ಬಗ್ಗೆ ಬೇಕಾದರೂ ವಿಸ್ತಾರವಾಗಿ ಚರ್ಚೆ ಮಾಡಲಿಕ್ಕೆ ಸಂಪೂರ್ಣವಾಗಿ ಅವಕಾಶ ಇದೆ. ಅದನ್ನು ಬಳಸಿಕೊಳ್ಳಿ.

ಶ್ರೀ ಜಗದೀಶ್ ಶೆಟ್ಟರ್:– ಬಜೆಟ್ ಬಗ್ಗೆ ಕೂಡ ನಾವು ಮಾತನಾಡಬಯಸುತ್ತೇವೆ.

ಶ್ರೀ ಆರ್.ವಿ. ದೇಶಪಾಂಡೆ (ಮಾನ್ಯ ಉನ್ನತ ಶಿಕ್ಷಣ ಪ್ರವಾಸೋದ್ಯಮ ಸಚಿವರು):– ಮಾನ್ಯ ಅಧ್ಯಕ್ಷರೆ, ವಿಷಯ ಮಹತ್ವದ್ದಾಗಿದೆ. ಆದರೆ Adjournment motion ನಲ್ಲಿ ಚರ್ಚೆ ಬೇಡ, question hour ಆದ ಮೇಲೆ ಆ ವಿಷಯವನ್ನು ಬೇರೆ ರೂಪದಲ್ಲಿ ಚರ್ಚೆ ಮಾಡಲಿ.

ಅಧ್ಯಕ್ಷರು:– ಬೇರೆ ರೂಪದಲ್ಲಿ ಆ ವಿಷಯವನ್ನು ಚರ್ಚೆ ಮಾಡೋಣ.